ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-02/2022

ದಿನಾಂಕ:05.08.2022

**ಜ್ಞಾಪನ**

ದಿನಾಂಕ:.07.08.2022 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಯಲಿರುವ ಕಿರಿಯ ಸಹಾಯಕರು,ಈ ಹುದ್ದೆಗೆ **ಹೆಚ್.ಕೆ.ಇ.ಎಸ್ ಪಾಲಿಟೆಟ್ನಿಕ್ ಗುಲ್ಬರ್ಗಾ ಕಾಲೇಜನ್ನು(KK27)** ಪರೀಕ್ಷಾ ಕೇಂದ್ರವನ್ನಾಗಿ ಆಯ್ಕೆಮಾಡಲಾಗಿತ್ತು. **ಆದರೆ ಕಣ್ತಪ್ಪಿನಿಂದಾಗಿ ಹೆಚ್.ಕೆ.ಇ.ಎಸ್ ಪಾಲಿಟೆಕ್ನಿಕ್ ಗುಲ್ಬರ್ಗಾ ಬದಲಾಗಿ ಹೆಚ್.ಕೆ.ಇ.ಎಸ್. ವುಮೆನ್ಸ ಪಾಲಿಟೆಕ್ನಿಕ್(KK27)** ಗುಲ್ಬರ್ಗಾ ಎಂದು ನಮೂದಿಸಲಾಗಿದ್ದು, ಆ ಕೇಂದ್ರಕ್ಕೆ ನಿಗದಿಪಧಿಸಲಾಗಿರುವ ಎಲ್ಲಾ 360 ಪರೀಕ್ಷಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರಿಕೆಯಲ್ಲಿ **ಹೆಚ್.ಕೆ.ಇ.ಎಸ್. ವುಮೆನ್ಸ ಪಾಲಿಟೆಕ್ನಿಕ್(KK27)** ಗುಲ್ಬಗಾ ಎಂದು ನಮೂದಾಗಿದ್ದು, ಈಗಾಗಲೇ ಕೆಲವು ಅಭ್ಯರ್ಥಿಗಳು ಪ್ರವೇಶ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಂಡಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ.

ಈ ನ್ಯೂನ್ಯತೆಯನ್ನು ಗಮನಿಸಿ ಪ್ರಸ್ತುತ ಎಲ್ಲಾ 360 ಪರೀಕ್ಷಾರ್ಥಿಗಳ ಪ್ರವೇಶ ಪತ್ರಿಕೆಗಳಲ್ಲಿ **ಹೆಚ್.ಕೆ.ಇ.ಎಸ್ ಪಾಲಿಟೆಟ್ನಿಕ್, ಐವಾನ್ -ಇ-ಶಾಹಿ ಏರಿಯಾ, ಎಂ.ಎಸ್.ಐ. ಡಿಗ್ರಿ ಕಾಲೇಜು ಪಕ್ಕ, ಗುಲ್ಬರ್ಗಾ** ಎಂದು ಸರಿಪಡಿಸಿ ನಮೂದಿಸಲಾಗಿದ್ದು, ಸದರಿ ಬದಲಾವಣೆಯನ್ನು ಸಂಬಂಧಪಟ್ಟ ಪರೀಕ್ಷಾ ಕೇಂದ್ರದ ಅಭ್ಯರ್ಥಿಗಳು ಹಾಗೂ ಅಧಿಕಾರಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ. **ಈಗಾಗಲೇ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡಿರುವ ಅಭ್ಯರ್ಥಿಗಳು ಮತ್ತೊಮ್ಮೆ ಹೊಸ ಪರೀಕ್ಷಾ ಕೇಂದ್ರದ ವಿಳಾಸ ಹೊಂದಿರುವ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.**

**ವಿಶೇಷ ಸೂಚನೆ:-**

1. ಪರೀಕ್ಷೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಂಶುಪಾಲರು, ಹೆಚ್.ಕೆ.ಇ.ಎಸ್ ವುಮೆನ್ಸ್ ಪಾಲಿಟೆಟ್ನಿಕ್, ಗುಲ್ಬರ್ಗಾ ರವರಿಗೆ ನೀಡಲಾಗಿರುವ ಸ್ಟೇಷನರಿ, ಜಾಮರ್ ಹಾಗೂ ಇತರೆ ಪರೀಕ್ಷಾ ಪರಿಕರಗಳನ್ನು ಪ್ರಾಂಶುಪಾಲರು, ಹೆಚ್.ಕೆ.ಇ.ಎಸ್ ಪಾಲಿಟೆಟ್ನಿಕ್ ಐವಾನ್ -ಇ-ಶಾಹಿ ಎರಿಯಾ, ಎಂ.ಎಸ್.ಐ. ಡಿಗ್ರಿ ಕಾಲೇಜು ಪಕ್ಕ, ಗುಲ್ಬರ್ಗಾ ರವರಿಗೆ ವರ್ಗಾಯಿಸಲು ಸೂಚಿಸಿದೆ.
2. ಮೇಲಿನ ಬದಲಾವಣೆಗಳನ್ನು ತ್ರಿಸದಸ್ಯ ಸಮಿತಿಯ ಗಮನಕ್ಕೆ ತರುವುದು.
3. **KK27** ಪರೀಕ್ಷಾ ಕೇಂದ್ರದ ಕೋಡ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿ.

1) ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ.
2) ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3) ಪ್ರಾಂಶುಪಾಲರು, ಹೆಚ್.ಕೆ.ಇ.ಎಸ್ ಪಾಲಿಟೆಟ್ನಿಕ್, ಐವಾನ್ -ಇ-ಶಾಹಿ ಎರಿಯಾ, ಎಂ.ಎಸ್.ಐ. ಡಿಗ್ರಿ ಕಾಲೇಜು ಪಕ್ಕ, ಗುಲ್ಬರ್ಗಾ.
4) ಪ್ರಾಂಶುಪಾಲರು, ಹೆಚ್.ಕೆ.ಇ.ಎಸ್ ವುಮೆನ್ಸ್ ಪಾಲಿಟೆಟ್ನಿಕ್, ಐವಾನ್ -ಇ-ಶಾಹಿ ಎರಿಯಾ, ಪಿ.ಡಬ್ಲ್ಯೂಡಿ ಕ್ವಾರ್ಟಸ್ ಪಕ್ಕ, ಗುಲ್ಬರ್ಗಾ.
5) ಸಂಬಂಧಪಟ್ಟ ಕೇಂದ್ರದ ಎಲ್ಲಾ ಅಭ್ಯಾರ್ಥಿಗಳಿಗೆ.
6) ಗಣಕಶಾಖೆಗೆ ಅಗತ್ಯ ಕ್ರಮಕ್ಕಾಗಿ

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in